SA – 401

II Semester B.A./B.H.M. Examination, April/May 2015
(CBCS) (Freshers) (2014 – 15 & Onwards)
ಕನ್ನಡ ಭಾಷಾ ಪತ್ರಿಕೆ – II
ಸುವರ್ಣ ಸಂಪದ ಮತ್ತು ಚೋಮನದುಡಿ

Time : 3 Hours Max. Marks : 70

I. ಅ) ಈ ಪದ್ಯದ ಭಾವಾರ್ಥ ಬರೆಯಿರಿ : (1×6=6)

ನರದಾಗೆ ನೆಗೆದವು ಮಿಡಿನಾಗರ ಮಿಂಚು
ಬೆದರಿ ಬಿದ್ದಿತು ಆಗ 'ಸತ್ಯೇದ' ಸಂಚು
ಹೊಂಟಾಳೊ ಪುಟ್ಟಕ್ಕ ದೊಣೆ ನೀರ ಬೆಟ್ಟಕ್ಕೆ
ಕಟ್ಟು ಕಟ್ಟಳೆಯನ್ನು ಸಿಟ್ಟಲ್ಲಿ ಸುಟ್ಟಾಳೊ
ಹೊಸ ಆಸೆ ಹುಟ್ಟಲ್ಲಿ ಹೆಜ್ಜೆ ಇಟ್ಟಾಳೊ

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : (2×2=4)

ಎಸ್.ಜಿ. ಸಣ್ಣಗುಡ್ಡಯ್ಯ, ಸೀತಮ್ಮನ ದೊಣೆ, ಭಾಗೀರತಿ, ಡಾ. ಕುಮಾರಚಲ್ಯ.

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : (1×10=10)

1) ಮಾದಿಗರ ಹುಡುಗಿ ಕವಿತೆಯಲ್ಲಿ ವ್ಯಕ್ತವಾದ ಸಾಮಾಜಿಕ ವಿಡಂಬನೆಯನ್ನು ಚರ್ಚಿಸಿ.
2) 'ಬೀಸುವುದೆ ಇನ್ನೊಮ್ಮೆ ಆ ಚಂಡಪವನ' ? ಕವಿತೆಯ ಸ್ವಾರಸ್ಯವನ್ನು ತಿಳಿಸಿ.

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (2×5=10)

1) ಚೋಮನ ಕುಟುಂಬದ ಪರಿಚಯ ಮಾಡಿಕೊಡಿ.
2) ಕಾದಂಬರಿಯಲ್ಲಿ 'ದುಡಿ'ಯ ವಿಶೇಷತೆಯನ್ನು ಗುರುತಿಸಿ.
3) ಸಂಕಪ್ಪಯ್ಯ ಚೋಮನಿಗೆ ಗೇಣಿಗೆ ಹೊಲ ಕೊಡದಿರಲು ಕಾರಣವೇನು ?

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಚೋಮನ ಬದುಕಿನ ಮಹತ್ವಾಕಾಂಕ್ಷೆ ಯಾವುದು ? ಅದನ್ನು ಈಡೇರಿಸಿಕೊಳ್ಳಲು ಅವನು ಪಟ್ಟ ಕಷ್ಟಗಳನ್ನು ಚರ್ಚಿಸಿ.
2) ಬೆಳ್ಳಿ, ಸಂಕಪ್ಪಯ್ಯರ ಪಾತ್ರಗಳನ್ನು ಪರಿಚಯಿಸಿ.

P.T.O.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಬಸ್ರಾಜನ ನಾಯಿ ಪ್ರಸಂಗವನ್ನು ವಿವರಿಸಿ.

2) ಸ್ವರ್ಗ-ನರಕದ ಕಲ್ಪನೆ ಪ್ರಬಂಧದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಕಾವ್ಯದ ನಿರ್ಮಾಣ, ಚರ್ವಣ ಎರಡೂ ಬದುಕಿಗೆ ಅತ್ಯಗತ್ಯ – ಎಂಬುದನ್ನು ಪ್ರಬಂಧದ ಹಿನ್ನೆಲೆಯಲ್ಲಿ ಚರ್ಚಿಸಿ.

2) ಕಾಗೆ ಹಾಗೂ ಹಕ್ಕಿಯ ಸಂವಾದದ ಸ್ವಾರಸ್ಯವನ್ನು ವಿವರಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಡಾರ್ವಿನ್‌ನ ವಿಕಾಸವಾದವನ್ನು ವಿಶ್ಲೇಷಿಸಿ.

2) ಕಡಲ ಪರಿಸರ ಮಾಲಿನ್ಯಗೊಳ್ಳಲು ಲೇಖಕಿ ನೀಡುವ ಕಾರಣಗಳೇನು ?

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಜಾಗತೀಕರಣದ ಪ್ರಭಾವದಿಂದ ಶಿಕ್ಷಣ ಕ್ಷೇತ್ರದಲ್ಲಿ ಉಂಟಾದ ಬದಲಾವಣೆಗಳನ್ನು ಚರ್ಚಿಸಿ.

2) ಬರಿದಾಗುತ್ತಿರುವ ಕಡಲಿಗೆ ಲೇಖಕಿ ಗುರುತಿಸುವ ಕಾರಣಗಳನ್ನು ಕುರಿತು ಚರ್ಚಿಸಿ.

---